ಅವನೇ ಕರಕೊಂಡು ಹೋಗಿರ್ಬೇಕು' ಎಂದ ಅಮ್ಮನ ಮಾತಿಗೆ ಗುರುನಾಥನಿಗೆ ಸಿಟ್ಟೇ ಬಂದಿತು. ಅವನು ಬ್ಯಾಡವೇ ಬ್ಯಾಡ ನಿಮ್ಮ ಮನೆಯಲ್ಲಿ ಒಪ್ಪಲಾರರು ಎಂದದ್ದನ್ನು ಗುರುನಾಥ ಹೇಳಿದ. 'ಬಂದಿದ್ರಲ್ಲಮ್ಮಾ ಆ ಸ್ವಾಮಿಗಳು... ವಿಚಾರವಾದಿ ಹುಡುಗ್ರು, ರಾಮಕೃಷ್ಣಪ್ಪಾಂತ, ಡಾ. ಸ್ವಾಮಿಂತ ಅವರ ಮಾತು ಕೇಳ್ತಾಕೇಳ್ತಾ ಹಿಂಗೆ ಯೋಚ್ನೆ ಮಾಡ್ಬಹುದಾ? ಬದುಕಬಹುದಾಂತ ನನ್ಗೆ ಆಶ್ಚರ್ಯವಾಯ್ತಮ್ಮ. ಆ ಸ್ವಾಮಿಗಳ್ನ ಅವರು, ನೀವು ನಮ್ಮ ಕೇರೀಲಿ ಊಟ ಮಾಡಿ ಅಂದ ತಕ್ಷಣ, ಆಯ್ತು ಅದಕ್ಕೇನು ಅಂತ ಅಂದ್ರಮ್ಮ ಸ್ವಾಮಿಗಳು. ನಾನು ಅವರ ಮುಖಾನೇ ನೋಡ್ತಾ ಇದ್ದೆ. ಒಂದು ಸಣ್ಣ ಅಳುಕೇ, ಅಂಜಿಕೆಯೇ? ಎಂಥಾ ಧೈರ್ಯವಮ್ಮಾ ಅವರ್ದು. ನಾವೆಂಗೆ ಈಸು ವರ್ಷ ಯೋಚ್ನೆ ಮಾಡಿದ್ವಿ..! ನೆಡ್ಕಂಡು ಬಂದ್ವಿ..? ಜಾತಿಯ ಒಣ ಪ್ರತಿಷ್ಠೆ. ನೀರು ಕೊಡ್ಲಿಲ್ಲ. ಮಲಹೊರಿಸಿದ್ವಿ... ಒಂದಾ... ಎರಡಾ..? ನನ್ಗೆ ಆ ಕ್ಷಣಕ್ಕೆ ಆ ಸ್ವಾಮಿಗಳ ಜೊತೇನೇ ಹೋಗ್ಬಿಡೋಣಾಂತ ಅನ್ನಿಸ್ತು. ಮಗ್ಳು ಅನಸೂಯ, ನೀನು, ಸರಸ್ವತಿ ಪಾಪು ನೆನಸ್ಕಂಡು ಬಂದ್ಬಿಟ್ಟೆ. ಅವರ ಜೊತೆ ಊಟಕ್ಕೆ ಕುಂತೆ. ಅದಕ್ಕಿಂತ ಪುಣ್ಯ ಇನ್ನೇನಮ್ಮಾ?' ಎಂದ ಗುರುನಾಥ. 'ರಾಘವೇಂದ್ರರೇ ಆ ಸ್ವಾಮಿಗಳ ರೂಪದಲ್ಲಿ ಬಂದು ನಿನ್ಗೆ ಪ್ರೇರಣೆ ಮಾಡಿದ್ದಾರೋ ಗುರುನಾಥ, ತಪ್ಪೇನಿಲ್ಲ' ಎಂದ ಅಪ್ಪ ಅನಂತನಾರಾಯಣರ ಮಾತಿಗೆ ಗುರುನಾಥ ಸಿಡಿದುಬಿದ್ದ. 'ಎಲ್ಲದಕ್ಕೂ ಅವ್ರೇ ಕಾರಣ, ಅವ್ರೇ ಕಾರ್ಣ ಅಂತ ಅಂದ್ರೆ ನಮ್ಮದೇನೂ ಇಲ್ಲಾ? ಮತ್ತೆ ಇಷ್ಟು ವರ್ಷ ಅವರ್‍ಯಾಕಪ್ಪ ಸುಮ್ಮನಿದ್ರು? ಮಲ ಹೊರೋದ್ನ ನೋಡಿ, ಅದು ಮೈಮೇಲೆ ಇಳೀತಾ ಇರೋದ್ನ ನೋಡಿ ಅಸಹ್ಯ ಪಟ್ಟುಕೊಂಡು ಅದ್ನ ನಿಲ್ಲಿಸಿದವನು ನೀನು, ಮಲದ ಗುಂಡಿಗೆ ಹಾಕಿದ ಈಚಲು ಬೊಡ್ಡೆ ಕೊಳೆತು ಮುರಿದಿದ್ರಿಂದ ಅದ್ರಲ್ಲಿ ಬಿದ್ದವನು ನೀನು. ಅದ್ಕೆಲ್ಲಾ ರಾಘವೇಂದ್ರ ಕಾರ್ಣಾನಾ? ನೀನು ಬೀಳ್ದಂತೆ ರಾಘವೇಂದ್ರ ಎತ್ತಿದ್ರೆ ನಾನು ಒಪ್ಕೋತಾ ಇದ್ದೆ. ತನ್ನ ಎಮ್ಮೆಗಳ ದೊಡ್ಡಿಯಿಂದ ಬಿಡ್ಸಿಕೊಳ್ಳಾಕೆ ಬಂದ ಬಸವ್ವ ಮಾನವೀಯತೆಯಿಂದ ಅನಸೂಯಳ ಹೆರಿಗೆ ಮಾಡ್ಸಿದಳು. ಆಕೆನ್ನ ರಾಘವೇಂದ್ರ ಕಳಿಸಿದಾ ಅಂತೀಯಲ್ಲಪ್ಪಾ? ಹಂಗೆ ಅವ್ನೆ ಕಳ್ಸಿದ್ರೆ ಅವಳ ಎಮ್ಮೆ ಉಳಿಸಬಹುದಿತ್ತಲ್ಲಪ್ಪಾ. ಈಗ ಆ ಸ್ವಾಮಿಗಳ ವಿಚಾರ, ನಡೆ ನೋಡಿ ನಾನು ಜನಿವಾರ ತೆಗದು ಅವ್ರ ಮನೇಲಿ ಉಂಡುಬಂದ್ರೆ ಅದಕ್ಕೂ ರಾಘವೇಂದ್ರ ಕಾರ್ಣಾಂತ ಅಂತೀಯಲ್ಲಪ್ಪಾ. ಹಿಂಗೆ ನಂಬಿಕೆಂಡ್ರೆ ನಿನಗೆ ನೀನು, ಆ ಸ್ವಾಮಿಗಳಿಗೆ, ನನ್ಗೆ ನಮ್ಮ ನಡವಳಿಕೆಗಳಿಗೆ ಅಪಮಾನ ಮಾಡಿದಂಗೇಂತ ಅನ್ನಿಸೊಲ್ಲ? ಇದು ಇನ್ನೊಂದು ಥರ ದಾಸ್ಯನೇ?' ಎಂದ ಗುರುನಾಥನ ಮಾತು ಕೇಳಿ ಎಲ್ಲರೂ ಅಪ್ರತಿಭರಾದರು.

'ನಿಮ್ಮಪ್ಪನದೊಂದು ಭಾವ್ನೆ ಕಣೋ ಆ ಭಾವ ಜಗತ್ತಿನ್ಯಾಗೆ ಅವರು ಸುಖ ಕಾಣ್ತಾ ಇದ್ದಾರೆ. ನಿನ್ದೂ, ಆ ಗುಂಡ್ರುಗೋವಿದು ವಿಚಾರದ ಜಗತ್ತು ಕಣೋ ನೀವು ಅಲ್ಲಿ ಸುಖ ಕಾಣ್ತಾ ಇದ್ದೀರಿ. ಬದುಕಿಗೆ ಎರಡೂ ಬೇಕು ಕಣೋ...' ಎಂದಳು ಗುರುನಾಥನ ತಾಯಿ. 'ಹಂಗಾದ್ರೆ ಗುರುರಾಯರ ಫೋಟೊ ತೆಗುದು ಹಾಕೋ' ಎಂದರು ಸಿಟ್ಟಿನಲ್ಲಿ ಅನಂತನಾರಾಯಣ. 'ಅದ್ನ ತೆಗೆದು ಹಾಕೋಣಾಂತ ಎಲ್ಲಪ್ಪಾ ಅಂದೆ? ಎಲ್ಲದಕ್ಕೂ ಅವ್ರೇ ಕಾರ್ಣ ಅಂತ ಅಂದ್ರೆ ಮನುಷ್ಯನ ಪ್ರಯತ್ನಕ್ಕೆ ಗೌರವನೇ ಇಲ್ಲಾಂತ ಅಷ್ಟೇ' ಎಂದ ಗುರುನಾಥ.



ಅವನ ಮಾತು, ವಿಚಾರ ಇದೆಲ್ಲಿಂದ ಕಲಿತ, ಇದೇನು ಇಷ್ಟು ಬೇಗ ಬದ್ಲಾದ ಎಂದು ಎಲ್ಲರಿಗೂ ಆಶ್ಚರ್ಯವಾದರೂ ಅನಸೂಯಳಿಗೇನೂ ಆಗಲಿಲ್ಲ. ತನ್ನ ಗಂಡನೊಂದಿಗೆ ಇಂಥಾ ವಿಚಾರಗಳಲ್ಲಿ ಇಬ್ಬರ ನಡುವೆ ಆಗಾಗ ನಡೆಯುತ್ತಿದ್ದ ಜಟಾಪಟಿಯನ್ನು ಅವಳು ಕಣ್ಣಾರೆ ಕಂಡಿದ್ದಳು. ತನ್ನನ್ನು ಮದುವೆಯಾಗಲು ಒಪ್ಪಿ ಮನೆಗೆ ಬಂದ ಮೊದಲ ದಿನವೇ ಪ್ರಭಂಜನನ ಮೈಮೇಲೆ ಜನಿವಾರ ಇಲ್ಲದ್ದ, ಊಟ ಮಾಡಿದ ರೀತಿ, ಅವನ ಮಾತು ಎಲ್ಲ ನಾಸ್ತಿಕರದ್ದೆ. 'ಇವ್ನೆಲ್ಲಿ ಸಿಕ್ಕಮ್ಮಾ ಚಾರ್ವಾಕ' ಎಂದು ಗುರುನಾಥ ಅನಸೂಯಳ ಮುಂದೆ ಅಸಮಧಾನ ತೋಡಿಕೊಂಡದ್ದಲ್ಲದೆ, 'ಅವ್ನಿಗೆ ನಮ್ಮ ಆಚಾರ ವಿಚಾರಗಳೊಂಚೂರು ಗೊತ್ತಿಲ್ಲ ಕಣಮ್ಮಾ...' ಎಂದ ಅಪ್ಪನ ಮಾತಿಗೆ ಅನಸೂಯ ನಕ್ಕಿದ್ದಳು. 'ನಿಮ್ಮ ಯಜಮಾನ್ರಿಗೆ ಒಂದು ಜನಿವಾರನಾರ ಹಾಕಳಕ್ಕೆ ಹೇಳಮ್ಮಾ' ಅಂತ ಗುರುನಾಥ ಅದೆಷ್ಟು ಬಾರಿ ಅವಳಿಗೆ ಹೇಳಿದ್ದನೋ. ಆಗೆಲ್ಲ ಗಂಡನಿಂದ ಅನಸೂಯಳಿಗೆ ಮಂಗಳಾರತಿ ವಿನಾ ಬೇರೇನೂ ಸಿಗುತ್ತಿರಲಿಲ್ಲ. ಗಂಡನ ವಿಚಾರ, ಮನೆಯಲ್ಲಿ ಆಗತೊಡಗಿದ ಬದಲಾವಣೆ, ಇದಕ್ಕೆ ಪೂರಕವಾಗಿ ಹಟ್ಟಿಯಲ್ಲಿ ಸ್ವಾಮಿಗಳ ಚರ್ಚೆ, ಎಲ್ಲ ಸೇರಿ ಅಪ್ಪನಲ್ಲಿ ಒಂದು ಆಸ್ಫೋಟನವನ್ನೇ ಉಂಟು ಮಾಡಿದೆಯೆಂದು ಆಕೆ ಭಾವಿಸಿದಳು.

'ಹೋಗು ಸ್ನಾನನಾದ್ರು ಮಾಡಿಕೊಂಡು ಊಟ ಮಾಡು' ಎಂದರು ಅನಂತನಾರಾಯಣ. 'ಅಲ್ಲೇ ಊಟ ಮಾಡಿಬಂದೆ' ಎಂದ ಗುರುನಾಥ. 'ಚೆನ್ನಾಗಿತ್ತಾ ಮಾಂಸದ ಅಡುಗೆ?' ಎಂದಳು ಸರಸ್ವತಿ. 'ನೀನು ದಿನಾಲು ಮನೆಯಲ್ಲಿ ಕೋಸಂಬರಿ ಪನಿವಾರ ಮಾಡ್ತೀಯೇನೆ? ಅವರ ಅಡುಗೇನ ಉಳಿದವ್ರಿಗೆ ಹೆಂಗೇ ಬಡುಸ್ತಾರೆ. ಅಪೇಕ್ಷೆ ಇದ್ದವನು ತಿನ್ನಬಹುದು. ಹುಗ್ಗಿ, ಸೊಪ್ಪಿನಸಾರು, ಬಸ್ಸಾರು, ಮುದ್ದೆ, ಹಪ್ಪಳ' ಎಂದು ಪಟ್ಟಿಯನ್ನು ನೀಡಿದ ಗುರುನಾಥ. 'ಓ ಎಲ್ಲಾ ನಮ್ದೇ ಅಡುಗೆ' ಎಂದಳು ಸರಸ್ವತಿ. 'ಅಣ್ಣಾ, ಊಟ ಮಾಡ್ದೇ ಇದ್ರೂ ಪರ್ವಾಗಿಲ್ಲ. ಸ್ನಾನ ಮಾಡು ನಡಿ' ಎಂದಳು ಅನಸೂಯ. 'ಶುದ್ಧೀಕರಣ ಆಗ್ದೇನೆ ನಿಮ್ಗೆ ಸಮಾಧಾನ ಇದ್ದಂಗಿಲ್ಲ' ಎಂದ ಗುರುನಾಥ. 'ಹಂಗಲ್ಲಪ್ಪಾ, ಇದು ಶುದ್ಧೀಕರಣ ಅಲ್ಲ. ಇಡೀ ದಿನ ಬಿಸ್ಲಲ್ಲಿ ತಿರ್ಗಿ ಬಂದಿದ್ದೀರಿ ಪಾಪೂನ ಎತ್ಕಂತೀರಿ ಅದ್ಕೆ ಹೇಳ್ದೆ' ಎಂದಳು ಅನಸೂಯ. ಪಾಪು, ಅನಸೂಯ ಎಂದರೆ ಗುರುನಾಥ ಬೆಣ್ಣೆಯಂತೆ ಕರಗಿ ಬಿಡುತ್ತಾನೆ.

ಬಚ್ಚಲಲ್ಲಿ ಬಿಸಿನೀರು ತೋಡಿದ ಸರಸ್ವತಿ 'ಬರ್ರೀ' ಎಂದಳು. 'ಅದೇನು, ಎಂದೂ ಇಲ್ಲದ್ದು' ಎಂದ ಗುರುನಾಥನ ಮಾತಿಗೆ ಅನಸೂಯ, 'ಸುಮ್ನೆ ಹೋಗಪ್ಪ, ಅಮ್ಮನ ಗೋಳಾಡಿಸ್ದೆ ಇದ್ರೆ ನಿಮ್ಗೆ ಸಮಾಧಾನ ಇಲ್ಲ' ಎಂದಳು. ಗುರುನಾಥ ಬಚ್ಚಲಿಗೆ ಇಳಿದ. ಅಲ್ಲಿ ಪರಿಶುಭ್ರವಾದ ಪಂಚೆ, ಟವಲ್ಲು ನೇತಾಡುತ್ತಿದ್ದವು. ಒಂದು ಬಟ್ಟಲಲ್ಲಿ ಹರಳೆಣ್ಣೆ, ಇನ್ನೊಂದರಲ್ಲಿ ಸೀಗೇಪುಡಿ. ಕಾಲು ಮಡಿಚಿ ಚಕ್ಕಳಂಬಳಕ ಹಾಕಿ ಗುರುನಾಥ ಕುಳಿತ. ಗುರುನಾಥನೀಗ ಸರಸ್ವತಿಗೆ ಸಣ್ಣ ಹುಡುಗನಂತೆ ಕಾಣತೊಡಗಿದ. ತಲೆಗೆ ಎಣ್ಣೆ ಎರೆದು ಗಸಗಸ ಉಜ್ಜುತ್ತಿರುವಾಗಲೇ ಗುರುನಾಥನಿಗೆ ಅದೇನನ್ನಿಸಿತೋ ಸರಸ್ವತಿಯ ಕೆನ್ನೆ ಹಿಡಿದ. ಅವಳು 'ಅಯ್ಯೋ' ಎಂದು ಅತ್ತಿತ್ತ ನೋಡುವಾಗಲೇ ಮಗುವನ್ನು ಎತ್ತಿಕೊಂಡು ಅನಸೂಯ ಬಹಳ ಹೊತ್ತಿನಿಂದಲೂ ನಿಂತಿದ್ದಾಳೆ. ಇವರಿಬ್ಬರ ಪ್ರಾಯದಾಟ ಅವಳು ನೋಡಿದಳೋ? ಸರಸ್ವತಿ ನಾಚಿಕೊಂಡಳು. 'ನಿಮ್ಮ ಅಮ್ಮ ತಲೇಲಿ ಜಡವಾಗಿ ಕೂತಿರೋ ವಿಚಾರಗಳಿಗೆ ಎಣ್ಣೆಹಾಕಿ ಉಜ್ಜಿ, ಉಜ್ಜಿ, ಮೇಲೆ ಸೀಗೆಪುಡಿ ಸುರಿದು ಅವುಗಳಿಗೆ ಶ್ರಾದ್ಧ ಮಾಡ್ತಿದ್ದಾಳೆ. ಜಡವಾಗಿರೋದ್ಕೆ ಆಗಾಗ ಶ್ರಾದ್ಧ ಮಾಡ್ತಿದ್ರೆ ಮೈ, ಮನಸು ಹಗುರಾಗುತ್ತೆ ಕಣೆ... ಬರೀ ಏಕಾಂತದಲ್ಲಿ ಮೂಗುಹಿಡಿದು ಮಂತ್ರ ಹೇಳ್ತಾ ಕುಂತ್ರೆ ಹಿಂಗೇನೇ. ಲೋಕಾಂತದ ಬಯಲಿಗೂ ಆಗಾಗ ಬೀಳಬೇಕು. ಮೊಟ್ಟೆಯನ್ನು ಒಡೆಯದೆ ಚಿಟ್ಟೆಯಾಗಿ ಅದು ಹೆಂಗೆ ಹೊರಬಂದು ಹಾರಲು ಸಾಧ್ಯವಿಲ್ಲವೋ ಹಂಗೆ ನಮ್ಮ ನಿಂತು ಮಲೆತ ನೀರಿನ ಘಟ ಸ್ಫೋಟವಾಗದಿದ್ರೆ ನಾವೂ ಬಯಲಿಗೆ ಬರೊಲ್ಲ ಅನಸೂಯ, ಇಂಥಾ, ಘಟಸ್ಫೋಟಗಳು ಆಗಾಗ ಆಗ್ತಾನೇ ಇರ್ಬೇಕು' ಎಂದ ಗುರುನಾಥ. ಸರಸ್ವತಿಗೆ ಇದೆಲ್ಲ ನಿಧಾನಕ್ಕೆ ಅರ್ಥವಾಗತೊಡಗಿತು.

'ಅಣ್ಣಾ ನನ್ಗೆ ಇವತ್ತು ಬಹಳ ಸಂತೋಷವಾಗಿದೆ. ಜನಿವಾರ ತೆಗೆದು ದೊಡ್ಡ ಉಪಕಾರ ಮಾಡ್ದೆ. ಪ್ರಭಂಜನ ಮೊನ್ನೆ ಬಂದಾಗ ಉಪನಯನದ ವಿಚಾರ ಬಂತು. ನಿಮ್ಮ ಬಗ್ಗೆ ಸಿಡಿದುಬಿದ್ದರು. ಹಂಗೇನಾದ್ರೂ ನನ್ನ ಮಗನಿಗೆ ಅವುಗಳ್ನೆಲ್ಲಾ ಮಾಡಿದರೆ ಈ ಮನೇಗೆ ಹೆಜ್ಜೆ ಇಡೊಲ್ಲಾಂತ ಅಂದಿದ್ರು. ಮುಂದೆ ಅವನು ಬೆಳೆದು ದೊಡ್ಡವನಾದಾಗ ಅವ್ನಿಗೆ ಹೇಗೆ ತಿಳಿಯೊತ್ತೋ ಹಾಗೆ ಬದುಕ್ಲಿ ಅಂತ ಅಂದ್ರು. ಅದೇ ಸರಿ ಅಲ್ಲಾ ಅಣ್ಣಾ? ಈಗ ನೀನೇ ಜನಿವಾರ ತೆಗದು ನನ್ಗೆ ದೊಡ್ಡ ಉಪಕಾರ ಮಾಡ್ದೆ' ಎಂದಳು ಅನಸೂಯ. 'ಅಪ್ಪನಿಗೆ ಕೇಳೋ ಹಂಗೆ ಹೇಳ್ಬೇಡೆ. ಇದಾದದ್ದು ಗುರುರಾಯರಿಂದ್ಲೆ ಅಂತ ಅಂದುಬಿಡ್ತಾರೆ' ಎಂದು ನಕ್ಕ. ಎಲ್ಲರೂ ನಕ್ಕರು. ಗುರುನಾಥನ ತಾಯಿ ಕೊಠಡಿಯಿಂದಲೇ 'ಏನೇ ಅದು' ಎಂದರು. 'ಏನಿಲ್ಲ ಮಗು ಬಟ್ಟೆ ಮೇಲೆ ಉಚ್ಚೇ ಮಾಡ್ತು' ಎಂದಳು. 'ಅಲ್ಲಾ ಅದು ಮಾಡ್ದೇ ನೀನು ಮಾಡಾಕಾಗುತ್ತಾ' ಎಂದಳು. ಎಲ್ಲರೂ ನಕ್ಕರೂ. ಹೊರಗೆ ಕಟ್ಟೆಯ ಮೇಲೆ ಕುಳಿತಿದ್ದ ಅಪ್ಪ ಅನಂತನಾರಾಯಣರೂ.

ಪ್ರತಿಕ್ರಿಯಿಸಿ: **feedback@sudha.co.in**